**ಕರ್ನಾಟಕ ಸರ್ಕಾರ**

ಸಂಖ್ಯೆ:ಎಫ್‌ಡಿ 9 ಸಂಕೋ 2004

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ 2004.

**ಸುತ್ತೋಲೆ**

**ವಿಷಯ :** ಸಂಗ್ರಹಣ ವಿಷಯದ ಕುರಿತು ಸುಧಾರಣೆಗಳು ಸ್ಟಾಂಡರ್ಡ್ ಟೆಂಡರ್ ಹಾಗೂ ಕಾಂಟ್ರಾಕ್ಟ್ ದಸ್ತಾವೇಜುಗಳು ತಯಾರಿಕೆ ಮತ್ತು ಪ್ರಕಟಣೆ ಬಗ್ಗೆ.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂ:ಪಿಡಬ್ಲ್ಯೂಡಿ 141 ಎಸ್‌ಓ/ಎಫ್‌ಸಿ 2003, ದಿ: 29.8.2003.

ರಾಜ್ಯದ ಸಂಗ್ರಹಣ ಸಂಸ್ಥೆಗಳು, ಸರಕುಗಳು, ಸೇವೆಗಳು ಮತ್ತು ಕನ್ಸಲ್ಟೆನ್ಸಿ ಸೇವೆಗಳು ಇವುಗಳ ಸಾರ್ವಜನಿಕ ಸಂಗ್ರಹಣೆ ಮಾಡುವಲ್ಲಿ ಪಾರದರ್ಶಕತೆ ತರುವ ದೃಷ್ಟಿಯಿಂದ ಮತ್ತು ಉಪಯೋಗಿಸುತ್ತಿರುವ ವಿಧಾನಗಳಲ್ಲಿ ಏಕರೂಪತೆ ತರುವ ಸಲುವಾಗಿ ಸರಕುಗಳು, ಸೇವೆಗಳು ಮತ್ತು ಕನ್ಸಲ್ಟೆನ್ಸಿ ಸೇವೆಗಳು ಸಂಗ್ರಹಣೆಗಾಗಿ ಸ್ಟಾಂಡರ್ಡ್ ಟೆಂಡರ್ ಮತ್ತು ಕಾಂಟ್ರಾಕ್ಟ್ ದಸ್ತಾವೇಜುಗಳನ್ನು ತಯಾರಿಸುವುದು ಮತ್ತು ಅವುಗಳ ಕಡ್ಡಾಯ ಉಪಯೋಗವನ್ನು ಮಾಡುವುದನ್ನು ಪ್ರಸ್ತಾಪಿಸಲಾಗಿದೆ.

ಇದರಂತೆ, ಕರಡು ಸ್ಟಾಂಡರ್ಡ್ ದಸ್ತಾವೇಜುಗಳನ್ನು ತಯಾರಿಸಲಾಗಿದೆ ಮತ್ತು ಆರ್ಥಿಕ ಇಲಾಖೆಯ ವೆಬ್‌ಸೈಟ್ "Kar.nic.in/finance/transparency" ನಲ್ಲಿ ಲಭ್ಯ ಮಾಡಲಾಗಿದೆ ಮತ್ತು ಸಂಖ್ಯೆ:ಪಿಡಬ್ಲ್ಯೂಡಿ 141 ಎಸ್‌ಓ/ಎಫ್‌ಸಿ 2003, ದಿನಾಂಕ: 29.8.2003 ರಲ್ಲಿ ಹೊರಡಿಸಲಾಗಿದ್ದ ಸುತ್ತೋಲೆ ಪತ್ರದಲ್ಲಿ ರಾಜ್ಯದ ಹಲವಾರು ಸಂಗ್ರಹಣಾ ಸಂಸ್ಥೆಗಳು (ವೈಯಕ್ತಿಕ ಅಥವಾ ಸಂಸ್ಥೆ), ಗುತ್ತಿಗೆದಾರರು (ವೈಯಕ್ತಿಕ ಅಥವಾ ಸಂಘ), ವಿತರಣೆದಾರರು ಮತ್ತು ಜನಸಾಮಾನ್ಯರು ಇವರುಗಳಿಂದ ರಚನಾತ್ಮಕ ಪ್ರತಿಕ್ರಿಯೆಗಳು, ಸುಧಾರಣೆ ಸಲಹೆಗಳು, ನ್ಯೂನತೆಗಳು ತೋರಿಸುವ ಬಗ್ಗೆ ತಿಳಿಸಲು ಆಹ್ವಾನಿಸಲಾಗಿದೆ. ಅದರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಈ ಸುತ್ತೋಲೆಯ ಪ್ರಕಾರ ಪ್ರತಿಕ್ರಿಯೆಗಳು ಮತ್ತು ಸಲಹೆಗಳು ದಿನಾಂಕ: 15ನೇ ಅಕ್ಟೋಬರ್ 2003ರ ಒಳಗಾಗಿ ಕಳುಹಿಸಲು ಕೋರಲಾಗಿತ್ತು. ಆದರೂ ಇದುವರೆಗೆ ಸಂಬಂಧಪಟ್ಟವರಿಂದ ಪ್ರತಿಕ್ರಿಯೆಗಳು ಬಂದಿರುವುದಿಲ್ಲ.

ಸದರಿ ಸ್ಟಾಂಡರ್ಡ್ ದಸ್ತಾವೇಜುಗಳನ್ನು ಬೇಗನೆ ಅಂತಿಮಗೊಳಿಸಬೇಕಾಗಿದೆ. ಆದುದರಿಂದ, ಮೇಲ್ಕಂಡ ಸುತ್ತೋಲೆಯಲ್ಲಿ ತಿಳಿಸಿದಂತೆ ಪ್ರತಿಕ್ರಿಯೆಗಳನ್ನು ತ್ವರಿತಗೊಳಿಸಿ ಅವುಗಳನ್ನು ಹ್ಯಾಂಡ್ ಡೆಲಿವರಿ ಅಥವಾ ಇ-ಮೇಲ್ ಮೂಲಕ ಈ ಇಲಾಖೆಗೆ ಈ ವಿಷಯದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳುವ ಸಲುವಾಗಿ ಮಾರ್ಚ್, 15, 2004ರ ಒಳಗಾಗಿ ಕಳುಹಿಸಬೇಕಾಗಿ ಮತ್ತೊಮ್ಮೆ ವಿನಂತಿಸಲಾಗಿದೆ.

ಡಿ.ಎನ್. ನರಸಿಂಹರಾಜು
ಸರ್ಕಾರದ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವೆಚ್ಚ)